**ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಜಮಖಂಡಿ**

ಸಿ.ಸಿ. ನಂ- 496/2015

Cw-15 Pw-10

| | |
|---|---|
| ಹೆಸರು | ಸುಜಾತಾ ಗಂಡ ಶಾಮು ಬಜಂತ್ರಿ |
| ವಯಸ್ಸು | 35 ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಾಸಸ್ಥಳ | ಜಮಖಂಡಿ |

ದಿನಾಂಕಃ08-09-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಎಪಿಪಿ ರವರಿಂದ-**

ದಿನಾಂಕ 13-01-2014 ರಂದು ನನ್ನ ಚಿಕ್ಕವ್ವಾ ಸುಲೋಚನಾ ಬಜಂತ್ರಿ ರವರು ಕಬ್ಬಿನ ಟ್ರೇಲರ್ ಪಲ್ಟಿಯಾಗಿ ಅಪಘಾತದಲ್ಲಿ ಗಾಯಹೊಂದಿ ಜಮಖಂಡಿ ಸರ್ಕಾರಿ ಆಸ್ಪತ್ರೆಯಲ್ಲಿ ಮೃತವಾಗಿದ್ದ ಬಗ್ಗೆ ಪೋಲಿಸರು ಸಂಜೆ 06-15 ರಿಂದ 07-15 ವರೆಗೆ ನನ್ನ ಸಮಕ್ಷಮ ಶವ ಪಂಚನಾಮೆಯನ್ನು ಜರುಗಿಸಿದ್ದು ನಾನು ಸದರಿ ಪಂಚನಾಮೆಗೆ ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ . ಪಂಚನಾಮೆ ಕಾಲಕ್ಕೆ ಪೋಲಿಸರು ಪೋಟೋ ಸಹ ತೆಗೆದಿರುತ್ತಾರೆ . ಶವ ಪಂಚನಾಮೆ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ- 11 ಎಂದು ಗುರುತಿಸಲಾಗಿದ್ದು ಸಾಕ್ಷಿ ಸಹಿಯನ್ನು ನಿಪಿ-11 ಬಿ ಎಂದು , ಪಂಚನಾಮೆ ಕಾಲಕ್ಕೆ ಪೋಟೋಗಳನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-12 ಎಂದು ಗುರುತಿಸಲಾಗಿದೆ .

**ಪಾಟೀ ಸವಾಲುಃ ಶ್ರೀ. ಎಸ್ ಬಿ ಎಚ್ 1 ಮತ್ತು 2 ನೇ ಆರೋಪಿ ಪರ ವಕೀಲರಿಂದ-**

ನನಗೆ ಆ ದಿನ ಯಾರು ಕರೆಸಿರುವದಿಲ್ಲ . ವಿಷಯ ಗೊತ್ತಾದ ನಂತರ ನಾನು ನೇರವಾಗಿ ಆಸ್ಪತ್ರೆಗೆ ಬಂದಿರುತ್ತೇನೆ . ಮೃತ ಸುಲೋಚನಾ ನನಗೆ ಚಿಕ್ಕವ್ವ ಆಗಬೇಕು . ಸುಲೋಚನಾ ಇವಳು ತಾನಾಗೇ ಬಿದ್ದು ಗಾಯ ಹೊಂದಿದ್ದರಿಂದ ಅಕೆಯ ಮೃತ ಪಟ್ಟಿರುತ್ತಾಳೆ ಅದರೆ ಕಬ್ಬಿನ ಟ್ರಾಕ್ಟರ ಪಲ್ಟಿಯಾದ ಕಾರಣ ಮೃತ ಪಟ್ಟಿರುವದಿಲ್ಲ ಎಂದರೆ ಸರಿಯಲ್ಲ . ನಾನು ಪೋಲಿಸರ ಕೋರಿಕೆಯ ಮೇರೆಗೆ ಈ ಪ್ರಕರಣದಲ್ಲಿ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಅವರ ಮಾತು ಕೇಳಿ ಖೊಟ್ಟಿ ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ನಾನು ಬಿಳಿ ಹಾಳೆಯ ಮೇಲೆ ಸಹಿ ಮಾಡಿದ್ದು , ಪಂಚನಾಮೆಯಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ ಪೋಲಿಸರ ಕೋರಿಕೆಯ ಮೇರೆಗೆ ಪಂಚನಾಮೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ . ನಾನು ಮೃತ ಸುಲೋಚನಾ ರವರಿಗೆ ಸಂಬಂದಿಕರಾದ ಕಾರಣ ಅವರ ಕೇಸಿಗೆ ಅನುಕೂವಾಗಲೀ ಎಂದು ನ್ಯಾಯಾಲಯದ ಮುಂದೆ ಬಂದು ಖೊಟ್ಟಿ ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ .

**ಪಾಟೀ ಸವಾಲುಃ ಶ್ರೀ. ಎನ್ ಬಿ ಜಿ 3 ನೇ ಆರೋಪಿ ಪರ ವಕೀಲರಿಂದ- ಮೇಲೆ ಹೇಳಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ .**

**ಮರು ವಿಚಾರಣೆಃ ಇಲ್ಲಾ**

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೆ.ಸರಿ ಇದೆ

sd/-

ಪ್ರಧಾನ ದಿವಾಣಿ ಮತ್ತು ಜೆ.ಎಂ.ಎಫ್.ಸಿ.

ನ್ಯಾಯಾಧೀಶರು ಜಮಖಂಡಿ